**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ,**

**ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 08/2022 |
| ಸಿ.ಡಬ್ಲೂ | : 01 |
| ಪಿ.ಡಬ್ಲೂ | : 01 |
| ಸಾಕ್ಷಿಯ ಹೆಸರು | : ಬಿಬಿಜಾನ್ ಇಸಾಕಹ್ಮದ ಮುಲ್ಲಾ |
| ವಯಸ್ಸು | : 54 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ನವಲಗುಂದ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 04.07.2025.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-4 ನನ್ನ ಮಗಳು. ಚಾಸಾ-5 ಮತ್ತು 8 ನನ್ನ ಸಂಬಂಧಿಕರು. ಚಾಸಾ-6 ಮತ್ತು 7 ರವರ ಪರಿಚಯವಿದೆ. ಚಾಸಾ-9 ರವರ ಪರಿಚಯವಿಲ್ಲ.

2014 ರಲ್ಲಿ ನಾವು ಆರೋಪಿತರ ಮನೆಯಲ್ಲಿ ನಾವು ಲಾವಣಿಯ ಆಧಾರದಲ್ಲಿದ್ದು, ಆರೋಪಿತರು ಒಂದು ದಿನ ಬೆಳಿಗ್ಗೆ ನಮ್ಮ ಮನೆಗೆ ಬಂದು ನಾವು ವಾಸವಿರುವ ಮನೆಗೆ ಸಂಬಂಧಿಸಿ ಹಣ ಕೇಳಿದ್ದು, ಹಣ ಪಾವತಿಸದಿದ್ದರೆ ಮನೆ ಖಾಲಿ ಮಾಡುವಂತೆ ತಿಳಿಸಿರುತ್ತಾರೆ. ಆರೋಪಿತರು ನನಗೆ, ಚಾಸಾ-4 ರವರಿಗೆ ಹೊಡೆಬಡೆ ಮಾಡಿರುತ್ತಾರೆ. ಕಾರಣ ಚಾಸಾ-4 ರವರು ಆ ಸಮಯಕ್ಕೆ ಗರ್ಭಿಣಿ ಇದ್ದರು ಅವರಿಗೆ ಗರ್ಭಪಾತ ಆಗಿರುತ್ತದೆ. ನಂತರ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಟ್ಟಿಗೆಯಿಂದ ಆತನ ಹಲ್ಲಿಗೆ ಹೊಡೆದಿದ್ದು, ಆತನ ಹಲ್ಲು ಕಿತ್ತು ಹೋಗಿರುತ್ತದೆ. ನಂತರ ನಾವು ನವಲಗುಂದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ನಾನು ಆರೋಪಿತರ ವಿರುದ್ದ ಪೋಲಿಸ ಠಾಣೆಗೆ ದೂರನ್ನು ಸಲ್ಲಿಸಿರುತ್ತೆನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು

ಹಾಗೂ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಹಲ್ಲೆಗೆ ಉಪಯೋಗಿಸಿದ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು **ಮುದ್ದೆ ಮಾಲು** 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ಸದರಿ ಘಟನೆಯು ದಿಃ 25-10-2014 ರಂದು ಆಗಿರುತ್ತದೆ ಎಂದರೆ ಸರಿ. ಆರೋಪಿತರು ನಮಗೆ ಸದರಿ ದಿನ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿತ್ತಾರೆ ಎಂದರೆ ಸರಿ. ನಂತರ ಪೊಲೀಸರು ದಿನಾಂಕಃ 27-10-2014 ರಂದು ಬೆ.08.00 ಯಿಂದ 09.00 ಗಂಟೆಯವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಮೇರೆಗೆ ಪಂಚನಾಮೆ ಪೂರೈಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಭಾವಚಿತ್ರವನ್ನು ನೋಡಿ ಗುರುತಿಸಿದ್ದು **ನಿಪಿ-2** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಎಂ ಎಚ್ ವಕೀಲರಿಂದಃ**

ನಮಗೆ 1990 ರಲ್ಲಿ ಸರ್ಕಾರದಿಂದ ನಿವೇಶನ ಮಂಜೂರಾಗಿತ್ತು ಎಂದರೆ ಸರಿಯಲ್ಲ. ನಾವು ಸದರಿ ನಿವೇಶನದಲ್ಲಿಯೇ ವಾಸವಿದ್ದೇವೆ ಎಂದು ಸರಿಯಲ್ಲ. ನಾವು ಆರೋಪಿತರ ಮನೆಯಲ್ಲಿ ವಾಸವಿದ್ದ ಬಗ್ಗೆ ಲಿಖಿತ ದಾಖಲೆ ಇರುತ್ತದೆ. ಸದರಿ ದಾಖಲೆಯನ್ನು 2014 ರಲ್ಲಿ ಪೋಲೀಸರಿಗೆ ನೀಡಿರುತ್ತೇನೆ. ನಾವು ಆರೋಪಿತರಿಗೆ ಹಣ ನೀಡಿದ್ದರ ಬಗ್ಗೆ ರಶೀದಿ ಹಾಜರು ಪಡಿಸಿರುವುದಿಲ್ಲ. ಆರೋಪಿತರ ಜಾಗೆ ಖುಲ್ಲಾ ಜಾಗೆಯಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದ ಸುತ್ತು ಮುತ್ತ ಜೈನ್ ಬಸದಿಗಳು ಹಾಗೂ ಮನೆಗಳು ಇವೆ ಎಂದರೆ ಸರಿ. ಚಾಸಾ-2 ರಿಂದ 8 ರವರು ನನ್ನ ಸಂಬಂಧಿಕರು ಎಂದರೆ ಸರಿ. ಸದರಿಯವರು ನನಗೆ ಸಹಾಯ ಮಾಡಲು ಬರುತ್ತಾರೆ ಎಂದರೆ ಸರಿ. ನನಗೆ ತೊಂದರೆಯಾದಲ್ಲಿ ನಾನು ಸದರಿಯವರಿಗೆ ತಿಳಿಸುತ್ತೇನೆ ಎಂದರೆ ಸರಿ. 1 ನೇ ಆರೋಪಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿ. 2 ನೇ ಆರೋಪಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿಯವರು ತಮ್ಮ ಉದ್ಯೋಗಕ್ಕಾಗಿ ಬೇರೆ ಊರಿಗೆ ಹೋಗಿ ಬರುತ್ತಾರೆ ಎಂದರೆ ಸರಿ. ಘಟನೆಯು ನಾವು

ವಾಸವಿದ್ದ ಬಸ್ತಿ ಓಣಿಯಲ್ಲಿ ನಡೆದಿರುತ್ತದೆ. ಆರೋಪಿತರು ಆಗಾಗ ಹಣ ಕೇಳುತ್ತಿದ್ದು ನಾವು ಅವರಿಗೆ ಹಣ ಪಾವತಿಸುತ್ತಿದ್ದೇವು. ಹಣ ಕೇಳಲು 1 ನೇ ಆರೋಪಿ ಮಾತ್ರ ಬರುತ್ತಿದ್ದರು. ನಮ್ಮ ಮನೆಯ ಹತ್ತಿರ ಬೆ.08.00 ಗಂಟೆಯ ಸುಮಾರು ಸಾಕಷ್ಟು ಜನ ಸಂದಣಿ ಇತ್ತು ಎಂದರೆ ಸರಿ. ನನ್ನ ದೂರನಲ್ಲಿ ನಾವು ವಾಸವಿದ್ದ ಮನೆಯ ಸಂಖ್ಯೆ ಹಾಗೂ ಚೆಕ್ಕುಬಂಧಿಯನ್ನು ಬರೆಸಿರುವುದಿಲ್ಲ ಎಂದರೆ ಸರಿ. ಆರೋಪಿತರ ಮನೆಗಳು ಬಾಲೋಧ್ಯಾನದ ಹತ್ತಿರ ಇವೆ ಎಂದರೆ ಸರಿ. ಸದರಿಯವರಿಗೆ ಸಂಬಂಧಿಸಿ 3-4 ಮನೆಗಳು ಇವೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನಾವು ಮೊದಲಿನಿಂದ ಆರೋಪಿತರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರಿಗೆ ಹೆದರಿಸುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾವು ಆರೋಪಿತರ ಮನೆಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮನೆಗೆ ಬಂದ ವೇಳೆ ನಾನು, ಚಾಸಾ-4 ಹಾಗೂ ನನ್ನ ಅಳಿಯ ಬಂದೇನವಾಜ ಇದ್ದೇವು. ಸದರಿ ನನ್ನ ಅಳಿಯ ಇದ್ದ ಬಗ್ಗೆ ಪೋಲೀಸರಿಗೆ ತಿಳಿಸಿರುತ್ತೇನೆ. ನಮ್ಮ ಮೂವರನ್ನು ಹೊರತುಪಡಿಸಿ ಘಟನಾ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ನಂತರ ಚಾಸಾ-8 ರವರು ಜಗಳ ಬಿಡಿಸಲು ಬಂದಿರುತ್ತಾರೆ. ಆರೋಪಿತರ ಕೃತ್ಯದಿಂದ ನನ್ನ ಹಲ್ಲು ಮುರಿದಿದ್ದು, ತುಂಬಾ ರಕ್ತ ಬಂದಿರುತ್ತದೆ. ಸದರಿ ರಕ್ತ ನನ್ನ ಸೀರೆಯ ಮೇಲೆ ಬಿದ್ದಿತ್ತು ಎಂದರೆ ಸರಿ. ಸದರಿ ಸೀರೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ. ಸದರಿ ಘಟನೆ 1-2 ಗಂಟೆಗಳ ಅವಧಿಯವರೆಗೆ ನಡೆದಿರುತ್ತದೆ. ನಾವು ಮೊದಲಿಗೆ ಪೋಲೀಸ ಠಾಣೆಗೆ ಹೋಗಿದ್ದು, ಪೋಲೀಸರು ನಮ್ಮನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಮ್ಮ ಜೊತೆ ಪೋಲೀಸರು ಬಂದಿರಲಿಲ್ಲ. ನಾವು ಕಿಮ್ಸ ಆಸ್ಪತ್ರೆಯಲ್ಲಿ 8-10 ದಿನಗಳ ಕಾಲ ದಾಖಲಾಗಿದ್ದೇವು. ಪೋಲೀಸರು ಸದರಿ ಆಸ್ಪತ್ರೆಗೆ ವಿಚಾರಣೆಗೆಂದು ಬಂದಿರಲಿಲ್ಲ. ನಂತರದಲ್ಲಿ ಆಸ್ಪತ್ರೆಯಿಂದ ಬಂದು ದೂರು ಸಲ್ಲಿಸಿರುತ್ತೇವೆ. ದೂರನ್ನು ಪೋಲೀಸರು ಬರೆದಿರುತ್ತಾರೆ. ಸದರಿ ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಾಗಲಿಲ್ಲ. ಅದರಲ್ಲಿ ಏನು ಬರೆದಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿರಲಿಲ್ಲ. ಚಾಸಾ-4 ರವರಿಗೆ ಗರ್ಭಪಾತವಾಗಿದ್ದರ ಕುರಿತು ದಾಖಲೆಯನ್ನು ಪೋಲೀಸರಿಗೆ ನೀಡಿರುತ್ತೇನೆ. ಆರೋಪಿತರಿಂದ ಆಸ್ತಿಯನ್ನುಕಬಳಿಸುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿರುತ್ತಾರೆ, ಅವಾಚ್ಯವಾಗಿ ಬೈದಿರುತ್ತಾರೆ ಹಾಗೂ ಜೀವದ ಬೆದರಿಕೆ ಹಾಕಿರುತ್ತಾರೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**